ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 23ನೇ ಮಾರ್ಚ್, 2020

ಕೇರಳ ತ್ಯಾಜ್ಯವನ್ನು ಕರ್ನಾಟಕದ ಗುಂಡ್ಲುಪೇಟೆಯಲ್ಲಿ ಸುರಿಯುತ್ತಿರುವ ಕುರಿತು

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

1489 (1780) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೇರಳದ ಕಸಾಯಿಖಾನೆ, ಖಾಸಗಿ ನರ್ಸಿಂಗ್ ಹೋಮ್‌ಗಳ ಹಾಗೂ ಇತರೆ ಅಪಾಯಕಾರಿ ತ್ಯಾಜ್ಯಗಳನ್ನು ರಾಜ್ಯದ ಗುಂಡ್ಲುಪೇಟೆಯಲ್ಲಿ ತಂದು ಸುರಿಯುತ್ತಿರುವ ವರದಿ ದಿನಪತ್ರಿಕೆಯಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗುಂಡ್ಲುಪೇಟೆಯ ಖಾಸಗಿ ಜಮೀನಿನ ಮಾಲೀಕರು ಹಣದ ಆಮಿಷದಿಂದ ತ್ಯಾಜ್ಯ ಸುರಿತಕ್ಕೆ ಅವಕಾಶ ಮಾಡಿಕೊಟ್ಟಿದ್ದು, ಲೋಡುಗಟ್ಟಲೆ ಬರುವ ತ್ಯಾಜ್ಯಗಳಿಂದ ಪರಿಸರ ಹಾಗೂ ಅಂತರ್ಜಲ ಕೂಡಾ ಕಲುಷಿತವಾಗುವ ಬಗ್ಗೆ ಸ್ಥಳಿಯರಿಂದ ದೂರು ದಾಖಲಾಗಿದೆಯೇ ;

(ಇ) ದಾಖಲಾಗಿದ್ದಲ್ಲಿ, ಸ್ಥಳೀಯ ಆಡಳಿತದಿಂದ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

(ಈ) ಬಂಡೀಪುರ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆ ಹಾಗೂ ಪೊಲೀಸ್ ಚೆಕ್ ಪೋಸ್ಟ್‌ಗಳಿದ್ದರೂ ತ್ಯಾಜ್ಯ ರವಾನೆಯಾಗುವ ಕುರಿತು ಸರ್ಕಾರ ತನಿಖೆ ಕೈಗೊಳ್ಳುವುದೇ ;

(ಉ) ಗುಂಡ್ಲುಪೇಟೆ ತಾಲ್ಲೂಕಿನಾದ್ಯಂತ ಹಲವಾರು ಭಾಗಗಳಲ್ಲಿ ಈ ರೀತಿ ತ್ಯಾಜ್ಯ ಸುರಿಯಲಾಗುತ್ತಿದ್ದು, ಇದರಿಂದಾಗುವ ದುಷ್ಪರಿಣಾಮವನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?